**ದಿಃ 05.08.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-** 2, 4, 7, 9, 11 ರಿಂದ 14 ಮತ್ತು 16 ನೇ ಆರೋಪಿತರ ಪರಃ ಶ್ರೀ ಎಸ.ಎಸ.ಡಿ.ವಕೀಲರಿಂದ :

11) ನನ್ನ ತಲೆ, ಭುಜ, ಬೆನ್ನಿಗೆ ರಕ್ತಗಾಯಗಳಾಗಿದ್ದವಾ ಎಂಬ ಪ್ರಶ್ನೆಗೆ ಸಾಕ್ಷಿ ತಲೆ ಮೇಲೆ ರಕ್ತಗಾಯವಾಗಿತ್ತು 5 ಹೊಲಿಗೆ ಹಾಕಿದ್ದರು ಎಂದು ನುಡಿಯುತ್ತಾರೆ. ಆ ರಕ್ತ ನನ್ನ ಮೈಮೇಲೆ ಹಾಗೂ ಬಟ್ಟೆ ಮೇಲೆ ಬಿದ್ದಿತು. ರಕ್ತ ಜಾಗಾದ ಮೇಲೆ ಬಿದ್ದಿರಲಿಲ್ಲ. ರಕ್ತವಾಗಿದ್ದ ಬಟ್ಟೆಗಳನ್ನು ಪೋಲಿಸರಿಗೆ ಕೊಟ್ಟಿಲ್ಲ ಎಂದರೆ ಸರಿ.

12) ಎಂತಹ ಬಡಿಗೆಗಳು ಇದ್ದವು ಅಂತಾ ಫಿರ್ಯಾಧಿಯಲ್ಲಿ ನಿಖರವಾಗಿ ಬರೆಸಿಲ್ಲ ಎಂದರೆ ಸರಿ. ಬಡಿಗೆಗಳನ್ನು ನಾನೇ ಪೋಲಿಸರಿಗೆ ತೋರಿಸಿದ್ದೆ. ಆ ಬಡಿಗೆಗಳನ್ನು ಆರೋಪಿತರು ನಮ್ಮ ಮೇಲೆ ಬಡಿಯುವಾಗ ನೋಡಿದ್ದೆ. ಅವುಗಳ ಮೇಲೆ ವಿಶೇಷ ಗುರುತು ಹಾಕಿ ಪೋಲಿಸರು ಜಪ್ತು ಮಾಡಿಕೊಂಡ ಬಗ್ಗೆ ಗೊತ್ತಿಲ್ಲ. ಮು.ಮಾ.1 ರಿಂದ 15 ತರಹದ ಬಡಿಗೆಗಳು ಹಾಗೂ 16 ರಿಂದ 19 ತರಹದ ಕಲ್ಲುಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ.

13) ಕಲ್ಲಿನಿಂದ ಒಗೆದಾಗ ನನ್ನ ಹೆಂಡತಿ ಮಹಾದೇವಿಗೆ, ಅಣ್ಣವ್ವಳಿಗೆ, ಶಾನವ್ವಳಿಗೆ ಗಾಯಗಳಾಗಿದ್ದವು. ಒಂದು ಕಲ್ಲಿಗೆ ರಕ್ತ ಹತ್ತಿತ್ತು. ಜಗಳವಾದಾಗ ನಾನು ಬೇಸುದ್ದಿಯಾಗಿಲ್ಲ. ಜಾಗಾದಲ್ಲಿ ಯಾವುದೇ ಪ್ರಥಮೋಪಚಾರ ಮಾಡಿಕೊಂಡಿಲ್ಲ. ಜಗಳ ಸಂಜೆ 05.00 ರಿಂದ 06.30 ವರೆಗೆ ಆಯಿತು. ಆ

ಕಾಲದಲ್ಲಿ ಹೊರಗಿನ ಜನ ಯಾರೂ ಸೇರಲಿಲ್ಲ. ಅಂಬ್ಯುಲೆನ್ಸನಲ್ಲಿ ನೇರವಾಗಿ ಸರ್ಕಾರಿ ದವಾಖಾನೆಗೆ ಹೋದೆವು. ನಾವು 9 ಜನ ಸರ್ಕಾರಿ ದವಾಖಾನೆಯಲ್ಲಿ ಸುಮಾರು ಅರ್ಧ ಗಂಟೆ ಕಾಲ ಇದ್ದು ಚಿಕಿತ್ಸೆ ಪಡೆದೇವು. ಅಲ್ಲಿ ವೈದರು ನಮ್ಮ ಕೈಯಲ್ಲಿ ರೆಪರನ್ಸ ಲೇಟರ ಕೊಟ್ಟಿಲ್ಲ.

14) ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ಹೊಲಕ್ಕೆ ಬಂದಿಲ್ಲ, ನನ್ನೊಂದಿಗೆ ಯಾವುದೇ ಜಗಳ ತೆಗೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಮಾಡುವ ಉದ್ದೇಶದಿಂದ ಮು.ಮಾ.1 ರಿಂದ 19 ನೇದ್ದವುಗಳನ್ನು ಬಳಸಿ ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಹಾಗೂ ಕೊಲೆ ಮಾಡುವ ಪ್ರಯತ್ನ ಮಾಡಿಲ್ಲ, ನಮಗೆ ಹೊಡೆಬಡೆ ಮಾಡಿಲ್ಲ ಹಾಗೂ ಜೀವಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

15) 420 ಕೇಸನಲ್ಲಿ ನಾನು 15 ದಿನ ಜೈಲಿನಲ್ಲಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿ 5 ದಿನ ಇದ್ದೆ ಎಂದು ನುಡಿಯುತ್ತಾರೆ. ಅದೇ ದ್ವೇಷದಿಂದ ಈ ರೀತಿ ಸುಳ್ಳು ಪ್ರಕರಣ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಎಲ್ಲ ಹೊಲ ಮಾರಿದ್ದರಿಂದ ದುಟಾಯಿತನ ಮಾಡಿ ಆರೋಪಿತರಿಂದ ಹೇಗಾದರೂ ಮಾಡಿ ಹೆಚ್ಚಿನ ಹೊಲ ಪಡೆಯಲು ಸುಳ್ಳು ಕೇಸು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಿವಿಲ್ ಕೇಸ ನಂಬರ ಹೇಳಲು ಬರುವುದಿಲ್ಲ. ಸನ್ 2010 ರಿಂದ 2014 ನೇ ಸಾಲಿನವರೆಗೆ ಯಾವುದೇ ಸಿವಿಲ್ ಕೇಸ ಇರಲಿಲ್ಲ ಎಂದರೆ ಸರಿಯಲ್ಲ. ಲೋಕಅದಾಲತನಲ್ಲಿ ರಾಜಿ ಮಾಡಿಕೊಂಡ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮೇಲೆ ಕಲ್ಲು ಎಸೆದಿಲ್ಲ ಎಂದರೆ ಸರಿಯಲ್ಲ.

8ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೇ ಕೆ ಸರಿ ಇದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.